ನಾನು ಪ್ರಸ್ತುತಪಡಿಸಿದ ಕಛೇರಿಯ ಬಗ್ಗೆ ಗುರುಗಳು ನನ್ನ ಅನುಪಸ್ಥಿತಿಯಲ್ಲಷ್ಟೇ ಹೊಗಳುತ್ತಿದ್ದರು. ತಪ್ಪುಗಳನ್ನು ಅಲ್ಲಿಯೇ ಹೇಳುತ್ತಿದ್ದರು. ಕೆಲವೊಂದು ತಪ್ಪುಗಳಿಂದ ಸಿಟ್ಟುಮಾಡಿಕೊಂಡರೆ, ಅದರ ಬಗ್ಗೆ ಪ್ರತಿದಿನವೂ ಹೇಳುತ್ತಿದ್ದರು. ನಾನು ಗಮನಿಸಿದ ಪ್ರಕಾರ ಅವರ ಶಬ್ದಕೋಶದಲ್ಲಿ ಯಾವುದೇ ವಿಷಯದಲ್ಲಾಗಲೀ ಶೇ 99 ಅನ್ನುವ ಪರಿಕಲ್ಪನೆಯೇ ಇರಲಿಲ್ಲ. ಪರಿಪೂರ್ಣತೆಯನ್ನು ಸಾಧಿಸಲೇಬೇಕು. ಸಾಧಿಸಲಾಗದೇ ಇದ್ದರೆ ಸಾಧಿಸುವವರೆಗೆ ಹಟ ತೊಟ್ಟು ಅಭ್ಯಸಿಸಬೇಕು ಎನ್ನುವುದು ಅವರ ತತ್ತ್ವ. ಅಲ್ಲಿ ನಾನು ಸಂಗೀತ ಮಾತ್ರವಲ್ಲಿ ಜೀವನದ ಪಾಠಗಳನ್ನು ಕಲಿತೆ. ಮಾರುಕಟ್ಟೆಗೆ ಹೋಗಿ ತರಕಾರಿ ಹೇಗೆ ಆಯ್ಕೆ ಮಾಡಬೇಕು, ಒಂದು ಲಕೋಟೆಗೆ ವಿಳಾಸವನ್ನು ಬರೆಯುವಾಗ ಅಂಚೆಯವನ ದೃಷ್ಟಿಕೋನದಿಂದ ಯೋಚನೆ ಮಾಡಿ ಹೇಗೆ ಬರೆಯಬೇಕು ಎಂದೆಲ್ಲ ಅವರು ಹೇಳುತ್ತಿದ್ದರು.

**◆ ಹೊಸ ತಲೆಮಾರಿನ ವಿದ್ಯಾರ್ಥಿಗಳ ಆಸಕ್ತಿಯನ್ನು ಹೇಗೆ ಗುರುತಿಸುತ್ತೀರಿ?**

ಸಂಗೀತವನ್ನು ಆಯ್ಕೆ ಮಾಡಿಕೊಂಡ ಹೊಸ ತಲೆಮಾರಿನ ವಿದ್ಯಾರ್ಥಿಗಳ ಆಸಕ್ತಿಯಲ್ಲಿ ಕಿಂಚಿತ್ತೂ ಕೊರತೆ ಇರುವುದಿಲ್ಲ. ಆದರೆ ವಿದೇಶಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯುವ ಸಮಯಾವಕಾಶವನ್ನು ಗಮನಿಸಿದರೆ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳು ಯಾಕೋ ದಿನವಿಡೀ ಬ್ಯುಸಿ ಆಗಿಯೇ ಇರುತ್ತಾರೆ ಎನಿಸುತ್ತದೆ. ಹಾಗಾಗಿ ಅವರಲ್ಲಿ ಕಲೆಯ ಬಗ್ಗೆ ಆಸಕ್ತಿ ಪ್ರತಿಭೆಯಿದ್ದರೂ ಪೋಷಿಸಿ ಬೆಳೆಸುವುದಕ್ಕೆ ಸವಾಲುಗಳು ಎದುರಾಗುತ್ತವೆ. ಆದರೆ, ಭಾರತದ ಅನೇಕ ಕಡೆಗಳಲ್ಲಿ ವಿದ್ಯಾರ್ಥಿ ಸಮೂಹದೊಡನೆ ಸಂವಹನ ನಡೆಸಿದಾಗ ಗಮನಿಸಿದ್ದು ಅವರು ಬೇಗನೇ ಕಲಿತು ಕೊಳ್ಳುತ್ತಾರೆ. ಒಂದು ಶಿಬಿರದಿಂದ ಇನ್ನೊಂದು ಶಿಬಿರದ ಅವಧಿಯಲ್ಲಿ ಅವರಲ್ಲಿ ಬೆಳವಣಿಗೆಯನ್ನು ಗುರುತಿಸಬಹುದು. ಈಗಿನ ಕಾಲದಲ್ಲಿ ಲಭ್ಯವಿರುವಂತೆ ಡಿಜಿಟಲ್ ಸೌಕರ್ಯವು ನಮ್ಮ ಕಲಿಕೆಯ ಕಾಲದಲ್ಲಿ ಲಭ್ಯವಿರಲಿಲ್ಲ. ಇಂದು ಈ ಸೌಕರ್ಯವನ್ನು ಬಳಸಿಕೊಂಡು ಕಲಿಯುವ ಪ್ರಕ್ರಿಯೆಯನ್ನು ಕ್ಷಿಪ್ರ ಗೊಳಿಸುವ ಅವಕಾಶವಿದೆ.



**◆ ನಿಮ್ಮ ಜೀವನದ ಸಂತೃಪ್ತ ಕ್ಷಣಗಳನ್ನು ನೆನಪಿಸಿ ಕೊಳ್ಳುವಿರಾ?**

ಸಂಗೀತಗಾರರಿಗೆ ಸಂತೋಷದ ಕ್ಷಣಗಳನ್ನು ಸಂಗೀತವೇ ಕಲ್ಪಿಸಿಕೊಡುತ್ತದೆಯಲ್ಲವೇ. ಒಳ್ಳೆಯ ಕಛೇರಿ ಏರ್ಪಟ್ಟಾಗ ಎಲ್ಲರೂ ಅಭಿನಂದಿಸಿದಾಗ ಸಂತೋಷಪಟ್ಟಿದ್ದೇನೆ. ಪ್ರತಿಯೊಂದು ಸಂತೋಷದ ಕ್ಷಣವನ್ನು ನಾನು ನನ್ನನ್ನು ಈ ಕ್ಷೇತ್ರಕ್ಕೆ ಪರಿಚಯಿಸಿದ ಅಮ್ಮನಿಗೆ ಅರ್ಪಿಸುತ್ತಾ ಸ್ವೀಕರಿಸುತ್ತೇನೆ. ಗುರುಗಳು ಶ್ಲಾಘಿಸಿದಾಗ, ಪ್ಯಾರಿಸ್‌ನಲ್ಲಿ ಕಿಕ್ಕಿರಿದ ಸಭಾಂಗಣದಲ್ಲಿ ಕಛೇರಿ ನಡೆಸಿದಾಗ, ರಾಷ್ಟ್ರಪತಿ ಭವನಕ್ಕೆ ಬರಾಕ್ ಒಬಾಮ ಅವರು ಭೇಟಿ ನೀಡಿದ್ದಾಗ ವಯೊಲಿನ್ ನುಡಿಸುವ ಅವಕಾಶ ಸಿಕ್ಕಾಗಲೆಲ್ಲ ಖುಷಿ ಆಗಿದ್ದಿದೆ. ನನ್ನದೇ ಊರಿನಲ್ಲಿ ಪ್ರಾಥಮಿಕ ಶಾಲೆಯ ಮೇಷ್ಟ್ರೆಲ್ಲ ಸೇರಿ ನನಗೆ ಸನ್ಮಾನ ಮಾಡಿದಾಗ ಕಣ್ಣಂಚು ಒದ್ದೆಯಾಗಿ, ಸಂತೃಪ್ತ ಕ್ಷಣಗಳನ್ನು ಅನುಭವಿಸಿದ್ದೇನೆ.

ಸಾಮಾನ್ಯವಾಗಿ ಶಾಲೆಯಲ್ಲಿ ಮೇಷ್ಟ್ರು ನಿಂತಿದ್ದಾಗ ವಿದ್ಯಾರ್ಥಿಗಳು ಕುಳಿತುಕೊಳ್ಳುವಂತಿಲ್ಲ. ಬಾಲ್ಯದಲ್ಲಿ ಕಲಿತ ಈ ಶಿಸ್ತು ಎಲ್ಲಿಯೂ ಮರೆಯಲಾರೆ. ಆದರೆ, ನನ್ನ ಶಾಲೆಯಲ್ಲಿ ನನ್ನನ್ನು ಒಂದು ಕುರ್ಚಿಯಲ್ಲಿ ಕುಳ್ಳಿರಿಸಿ ಶಿಕ್ಷಕರೆಲ್ಲರೂ ಸುತ್ತ ನಿಂತಿದ್ದಾಗ, ನನಗೆ ನಿಜವಾಗಿಯೂ ಏನು ಮಾಡಬೇಕೆಂದು ತೋಚಲಿಲ್ಲ. ಅವರೆಲ್ಲರೂ ನನ್ನನ್ನು ಆದರಿಸಿ ಸನ್ಮಾನಿಸಿದರು. ನನ್ನ ಜೀವನದ ಸಂತೋಷದ ಕ್ಷಣವಿದು.

●